ನಿಲುವಾಗಿತ್ತು. ಅಂದಿನ ದಿನಗಳಲ್ಲಿ ಅಖ್ತರನು ಮಸೀದಿಗೆ ಹೋಗುವ ಮಾತನ್ನಾಗಲೀ ಜುಮ್ಮಾ ನಮಾಜಿನ ಮಾತನ್ನಾಗಲೀ ಎತ್ತಿರಲಿಲ್ಲ. ಆದರೆ ರಮದಾನಿನ ಪುಣ್ಯ ಮಾಸದಲ್ಲಿ ಮಾತ್ರ ತನ್ನ ಮನೆಯ ಸಕಲ ಮಂದಿಯ ಜೊತೆಗೆ ತಾನೂ ರೋಜಾವನ್ನು ಪಾಲಿಸುತ್ತಿದ್ದ. ಆ ತಿಂಗಳಲ್ಲಿ ಇವರ ಸಿನಿಮಾ, ಬಿಯರು, ಬಿರಿಯಾನಿಗಳಿಗೆ ಕತ್ತರಿ ಬೀಳುತ್ತಿತ್ತು.

ಹೀಗೆ ಕಾಲೇಜಿನಲ್ಲೇನೋ ಅವರು ಖಾಸಂಖಾಸಾ ಗೆಳೆಯರಾಗಿದ್ದರಾದರೂ ಆ ನಂತರ ಇಬ್ಬರ ನಡುವೆ ಹೆಚ್ಚಿನ ಸಂಪರ್ಕವಿರಲಿಲ್ಲ. ಕಳೆದ ವರ್ಷ ನಡೆದ ಕಾಲೇಜಿನ ಪುನರ್ಮಿಲನ ಕಾರ್ಯಕ್ರಮಕ್ಕೆ ಅಖ್ತರ್ ಬಂದಿದ್ದ. ಆಗ ಒಂದಷ್ಟು ದಿನ ಅನಿರುದ್ಧನ ಮನೆಯಲ್ಲಿಯೇ ಇಳಿದುಕೊಂಡಿದ್ದ. ಆ ಯಾತ್ರೆ ಬಹುತೇಕ ಸಂತೋಷದಿಂದ, ಉತ್ಸಾಹದಿಂದ ಮತ್ತು ಉಲ್ಲಾಸದಿಂದ ಇತ್ತಾದರೂ, ಅವನು ಹೊರಡುವ ವೇಳೆಗೆ ಅನಿರುದ್ಧನ ಹೆಂಡತಿ ಕವಿತಾಳ ಮನಸ್ಸಿನಲ್ಲಿ ತುಸು ಅಸಮಾಧಾನವಿದ್ದಂತೆ ಕಂಡಿತ್ತು. ಅದಕ್ಕೆ ಎರಡು ಕಾರಣಗಳಿದ್ದುವು – ಒಂದು ಅಖ್ತರನಿಗೆ ನಾನ್‌ವೆಜ್ ತಿಂಡಿ ತಿನ್ನಿಸಬೇಕೆಂದು ರಿಚ್ಮಂಡ್ ಟೌನಿನ ಫನೂಸ್‌ಗೆ ಹೋಗಿದ್ದಾಗ ನಡೆದ ಘಟನೆ –

ಫನೂಸ್ ಬಳಿ ಬಂದಾಗ ಅನಿರುದ್ಧ ಕವಿತಾರ ಆರ್ಡರ್ ಸರಳವಾಗಿತ್ತು. ಯಾವುದೇ ತರಕಾರಿ ಕಬಾಬುಗಳಾಗಬಹುದು. ಅಖ್ತರ್ ಶೀಕ್ ಕಬಾಬ್ ಹೇಳಿದ. ಮತ್ತೆ ಮಗುವಿನತ್ತ ನೋಡಿ "ನಿನಗೆ?" ಎಂದು ಕೇಳಿದ.

"ನಾನು ಅಖ್ತರ್ ಅಂಕಲ್ ತಿಂದದ್ದನ್ನೇ ತಿಂತೀನಿ." ಎಂದ ಆ ಪೋರ. ಹುಡುಗ ಹಾಗೆ ಹೇಳುತ್ತಿದ್ದಂತಯೇ ಸುತ್ತಲೂ ವಿಚಿತ್ರ ಮೌನ ಆವರಿಸಿತು. ಮೂರೂ ಹಿರಿಯರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಅನಿರುದ್ಧನಿಗೆ ಈ ಬಗ್ಗೆ ಯಾವುದೇ ವಿರೋಧವಿದ್ದಂತೆ ಕಾಣಲಿಲ್ಲ.

"ಈ ಪ್ರಪಂಚದಲ್ಲಿ ಬೆಳೆದು ಬದುಕಬೇಕಾದವನು. ನಮಗೆ ಯಾವ ನಂಬಿಕೆಗಳೂ ಸ್ಟ್ರಾಂಗಾಗಿ ಇಲ್ಲ. ನಾವು ಅಭ್ಯಾಸದಿಂದ ಸಸ್ಯಾಹಾರಿಗಳಾದರೂ ಮಾಂಸಾಹಾರಿಗಳ ಬಗ್ಗೆ ನಮಗೆ ಯಾವ ಅಭ್ಯಂತರವೂ ಇಲ್ಲ. ಇದು ಆ ಪುಟ್ಟನೇ ಮಾಡಬೇಕಾದ ಆಯ್ಕೆ." ಎಂದು ಒಂದು ಭಾಷಣವನ್ನೇ ಬಿಗಿದ. ಅವನು ತಾನು ಹೇಳಿದ್ದನ್ನು ತುಸುಮಟ್ಟಿಗೆ ನಂಬಿಯೂ ಇದ್ದ. ಆದರೆ ಆಡುವಾಗಿನ ದನಿ ನಂಬಿಕೆಗಿಂತ ಹೆಚ್ಚಿನ ಕನ್ವಿಕ್ಷನ್‌ನಿಂದ ಕೂಡಿದ್ದಾಗಿತ್ತು. ತಾನು ಲಿಬರಲ್ ಎನ್ನುವ ವಿಷಯವನ್ನು ಕಾರ್ಯರೂಪದಲ್ಲಿ ತೋರಿಸಿಕೊಳ್ಳುವ ಅವಕಾಶವೂ – ತೋರಿಸಿಕೊಳ್ಳಲು ಸಾಧ್ಯವೇ ಎನ್ನುವ ಸವಾಲೂ ಅನಿರುದ್ಧನಿಗೆ ಒದಗಿ ಬಂದಿತ್ತು. ಆದರೆ ಅನಿರುದ್ಧನೊಬ್ಬನ ಮಾತಿನಾಧಾರದ ಮೇಲೆಯೇ ಮುಂದುವರೆಯಬಹುದು ಎಂದು ಅಖ್ತರನಿಗೆ ಅನ್ನಿಸಲಿಲ್ಲ. ಹೀಗಾಗಿ ಅವನು ಕವಿತಾಳ ಕಡೆಗೆ ನೋಡಿದ. ಕವಿತಾಳಿಗೂ ಇದನ್ನು ವಿರೋಧಿಸಲು ಕಾರಣವೂ, ಮಾತೂ ಸಿಗಲಿಲ್ಲ. ಅವಳು ಆ ಕ್ಷಣಕ್ಕೆ ಏನೇ ಹೇಳಿದ್ದರೂ ಇರ್‍ರಾಷನಲ್ ಆಗುತ್ತಿತ್ತು. ಹೀಗೆ ಪುಟ್ಟ ಹುಡುಗ ಅಖ್ತರನ ಜೊತೆ ಸೇರಿ ಕಬಾಬು ತಿಂದ.

ಈ ಘಟನೆ ಹಾಗೂ ಅಖ್ತರ ದಿನಕ್ಕೈದು ಬಾರಿ ಸಲ್ಲಿಸುತ್ತಿದ್ದ ನಮಾಜಿನ ವಿಷಯಕ್ಕೂ ಪುಟ್ಟ ಹುಡುಗ ಹೋಗಿ ಅವನ ಪಕ್ಕದಲ್ಲಿ ಮಂಡಿಯೂರುತ್ತಿದ್ದ ಪ್ರಕ್ರಿಯೆಯ ಬಗೆಗೂ ಅವಳಿಗೆ ಅಸಮಾಧಾನವಿತ್ತು. ಹುಡುಗ ಕೇಳಿದನೆಂದು ಅಖ್ತರ್ ಅವನಿಗೆ ನಮಾಜಿನ ಟೋಪಿಯನ್ನೂ ಕೊಟ್ಟಿದ್ದ. ತಕ್ಷಣಕ್ಕೆ ತೋರಿಸಿಕೊಳ್ಳದಿದ್ದರೂ ಈ ಎರಡೂ ವಿಚಾರಗಳು ಅವಳಿಗೆ ಕಿರಿಕಿರಿಯನ್ನುಂಟುಮಾಡಿದ್ದುವು.

ಅದು ಕಳೆದ ವರ್ಷದ ಮಾತಾಗಿತ್ತು. ವ್ಯಾಪಾರದ ನಿಮಿತ್ತ ಭಾರತಯಾತ್ರೆಯನ್ನು ಈಗ ಮತ್ತೆ ಅಖ್ತರ ಕೈಗೊಳ್ಳುತ್ತಿದ್ದ. ಅಖ್ತರನ ಕರೆ ಬಂದಾಗ ಅನಿರುದ್ಧ ತಕ್ಷಣಕ್ಕೆ ಅದನ್ನು ಸ್ವೀಕರಿಸಲಿಲ್ಲ. ಕಾಲೇಜಿನ ದಿನಗಳಲ್ಲಿ ಕಂಡಿದ್ದ ಆಧುನಿಕ ಎನ್ನಿಸಿಕೊಳ್ಳಬಹುದಾದ ಅಖ್ತರನಿಗೂ, ಈಗ ಆಧ್ಯಾತ್ಮಿಕತೆ